ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಇ-ಆಡಳಿತ ಡಿಜಿಟಲ್ ಇಂಡಿಯ 1 :2015-16 ದಿನಾಂಕ:29-06-2015

**ಅತಿಜರೂರು**

## ಸುತ್ತೋಲೆ

ವಿಷಯ: ಕರ್ನಾಟಕ ರಾಜ್ಯಾದ್ಯಂತ **Digital India Week** ಸ್ಪರ್ಧೆಗಳ ಕಾರ್ಯಕ್ರಮಗಳಿಗೆ 6 ರಿಂದ 8 ತರಗತಿ ಹಾಗೂ 9 ರಿಂದ 12 ತರಗತಿಯ ವಿಧ್ಯಾರ್ಥಿಗಳು ಭಾಗವಹಿಸುವ ಬಗ್ಗೆ.

ಉಲ್ಲೇಖ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಸಿಇಜಿ ಬೆಂಗಳೂರು ಪತ್ರ ಸಂಖ್ಯೆ ಸಿಇಜಿ/39/2014 ದಿನಾಂಕ: 27-06-2015

ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾಪಿಸಿದಂತೆ, ಆನ್‌ಲೈನ್ ರಸಪ್ರಶ್ನೆ ಸ್ಪರ್ಧೆಯನ್ನು **DEITY (Department of Electronic and Information Technology) (01-07-2015 ರಿಂದ 07-07-2015)** ವತಿಯಿಂದ ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಗೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಅನುದಾನರಹಿತ, ಎನ್.ವಿ.ಎಸ್, ಕೆ.ವಿ.ಎಸ್ ಹಾಗೂ ಎಲ್ಲಾ ಮಾಧ್ಯಮದ ಶಾಲೆಗಳ 6 ರಿಂದ 8 ತರಗತಿ ಹಾಗೂ 9 ರಿಂದ 12 ತರಗತಿಯ ವಿಧ್ಯಾರ್ಥಿಗಳು ಭಾಗವಹಿಸಲು ಅವಕಾಶವಿರುತ್ತದೆ.

ಸದರಿ ಆನ್‌ಲೈನ್ ಸ್ಪರ್ಧೆಯನ್ನು **www.digitalindia.in** ವೆಬ್‌ಸೈಟ್‌ನ ಮೂಲಕ ಹಮ್ಮಿಕೊಳ್ಳಲಾಗಿದ್ದು, ವೆಬ್‌ಸೈಟ್‌ನಲ್ಲಿ ನೀಡಿರುವ ಮಾಹಿತಿಯಂತೆ ಹಾಗೂ ಈ ಪತ್ರದೊಂದಿಗೆ ಲಗತ್ತಿಸಿರುವ ಸರ್ಕಾರದ ಮಾರ್ಗದರ್ಶಿಯಲ್ಲಿರುವಂತೆ ಪರಿಶೀಲಿಸಿಕೊಂಡು ಭಾಗವಹಿಸಬಹುದಾಗಿದೆ.

B3

ಆದ್ದರಿಂದ ಜಿಲ್ಲಾ ಉಪನಿರ್ದೇಶಕರುಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಸ್ಪರ್ಧೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಧ್ಯಾರ್ಥಿಗಳು ಭಾಗವಹಿಸಲು ಎಲ್ಲಾ ರೀತಿಯ ಸಹಕಾರ ವ್ಯಾಪಕ ಪ್ರಚಾರ ಮತ್ತು ಪ್ರೋತ್ಸಾಹವನ್ನು ನೀಡಲು ಈ ಮೂಲಕ ಸೂಚಿಸಿದೆ.

29/6/15

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ

*ಪ್ರತಿಯನ್ನು:*

*01.* ಸಿಇಓ, ಸಿಇಜಿ, ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ

*02.* ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ

*03.* ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ

*04.* ಕಛೇರಿ ಪ್ರತಿ.

ಸಂ: ಪ್ರಾ: ಉ.ನಿ.ಕ:1/ಡಿಜಿಟಲ್ ಇಂಡಿಯಾ-1/2015-16 ದಿ: 30.06.2015

ಈ ಮೇಲಿನ ಸುತ್ತೋಲೆಯನ್ನು ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಿದ್ದು, ಎಲ್ಲಾ ಪ್ರೌಢಶಾಲೆಗಳ ಮುಖ್ಯಸ್ಥರ ಗಮನಕ್ಕೆ ತಂದು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಕ್ರಮ ವಹಿಸುವುದು. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ website ದಿಂದ ಪಡೆಯುವುದು.

Shantha

ಉಪನಿರ್ದೇಶಕರು (ಆಡಳಿತ)

ಸಾರ್ವಜನಿಕ ಶಿಕ್ಷಣ ಇಲಾಖೆ

ಕಚೇರಿ, ಉಡುಪಿ ಜಿಲ್ಲೆ

ಪ್ರತಿ: ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಎಲ್ಲಾ ಪ್ರೌಢಶಾಲಾ ಮುಖ್ಯಸ್ಥರಿಗೆ ರವಾನಿಸಿದೆ.